"ಮಧುರ ಮಕ್ಕಳೇ - ಶ್ರೀಮತದಲ್ಲಿ ಎಂದೂ ಮನ್ಮತವನ್ನು ಸೇರಿಸಬಾರದು, ಮನಮತದಂತೆ ನಡೆಯುವುದೆಂದರೆ ತಮ್ಮ ಅದೃಷ್ಟಕ್ಕೆ ಗೆರೆಯನ್ನು ಎಳೆದುಕೊಳ್ಳುವುದು ಎಂದರ್ಥ"

ಪ್ರಶ್ನೆ: ಮಕ್ಕಳು ತಂದೆಯೊಂದಿಗೆ ಯಾವ ಆಸೆಯನ್ನು ಇಟ್ಟುಕೊಳ್ಳಬಾರದು?

ಉತ್ತರ: ಕೆಲವು ಮಕ್ಕಳು ಹೇಳುತ್ತಾರೆ - ಬಾಬಾ ನಮ್ಮ ಕಾಯಿಲೆಯನ್ನು ಸರಿ ಪಡಿಸಿರಿ. ಸ್ವಲ್ಪ ಕೃಪೆ ತೋರಿಸಿ. ಅದಕ್ಕೆ ತಂದೆಯು ಹೇಳುತ್ತಾರೆ - ಇವು ನಿಮ್ಮ ಹಳೆಯ ಇಂದ್ರಿಯಗಳಾಗಿವೆ. ಸ್ವಲ್ಪ ಕಷ್ಟವಂತು ಆಗುತ್ತದೆ, ಇದರಲ್ಲಿ ತಂದೆ ಏನು ಮಾಡುತ್ತಾರೆ! ಯಾರೇ ಸತ್ತು ಹೋಗುತ್ತಾರೆ, ದಿವಾಳಿಯಾಗುತ್ತಾರೆಂದರೆ ಇದರಲ್ಲಿ ಬಾಬಾರವರಿಂದ ಕೃಪೆಯನ್ನು ಏನು ಕೇಳುತ್ತೀರಿ. ಇದಂತೂ ನಿಮ್ಮ ಲೆಕ್ಕಾಚಾರವಾಗಿದೆ. ಯೋಗಬಲದಿಂದ ನಿಮ್ಮ ಆಯಸ್ಸನ್ನು ಹೆಚ್ಚಿಸಿಕೊಳ್ಳಬಹುದು. ಎಷ್ಟು ಸಾಧ್ಯವೋ ಯೋಗಬಲದಿಂದ ಕೆಲಸ ತೆಗೆದುಕೊಳ್ಳಿ.

ಗೀತೆ: ನೀನು ರಾತ್ರಿಯನ್ನು ಮಲಗಿ ಕಳೆದೆ, ಹಗಲೆಲ್ಲಾ ತಿನ್ನುತ್ತಾ ಕಳೆದೆ.........

ಓಂ ಶಾಂತಿ. ಮಕ್ಕಳಿಗಂತೂ ಓಂ ಎನ್ನುವ ಶಬ್ದದ ಅರ್ಥವನ್ನು ತಿಳಿಸಲಾಗಿದೆ. ಓಂ ಎಂದರೆ ಭಗವಂತ ಎಂದಲ್ಲ. ಓಂ ಎಂದರೆ ಅಹಂ ಅರ್ಥಾತ್ ನಾನು ಎನ್ನುವುದಾಗಿದೆ. ನಾನು ಯಾರಾಗಿದ್ದೇನೆ? ಇವು ನನ್ನ ಇಂದ್ರಿಯಗಳು. ತಂದೆಯೂ ಹೇಳುತ್ತಾರೆ ನಾನೂ ಸಹ ಆತ್ಮ, ಆದರೆ ನಾನು ಪರಮ ಆತ್ಮ ಅರ್ಥಾತ್ ಪರಮಾತ್ಮ ಆಗಿದ್ದೇನೆ. ಅವರು ಪರಮಧಾಮ ನಿವಾಸಿ ಪರಮಪಿತ ಪರಮಾತ್ಮ ಆಗಿದ್ದಾರೆ. ನಾನು ಈ ಶರೀರದ ಮಾಲೀಕನಲ್ಲವೆಂದು ತಂದೆಯು ಹೇಳುತ್ತಾರೆ. ನಾನು ರಚಯಿತ, ನಿರ್ದೇಶಕ, ಪಾತ್ರಧಾರಿ ಹೇಗೆ ಆಗಿದ್ದೇನೆ-ಇವು ತಿಳಿದುಕೊಳ್ಳುವ ಮಾತುಗಳಾಗಿವೆ. ನಾನು ಅವಶ್ಯವಾಗಿ ಸ್ವರ್ಗದ ರಚಯಿತನಾಗಿದ್ದೇನೆ. ಸತ್ಯಯುಗವನ್ನು ರಚಿಸಿ ಕಲಿಯುಗದ ವಿನಾಶವನ್ನು ಅವಶ್ಯವಾಗಿ ಮಾಡಿಸಲೇ ಬೇಕಾಗಿದೆ. ನಾನು ಮಾಡಿ-ಮಾಡಿಸುವವನಾಗಿರುವ ಕಾರಣ ನಾನು ಮಾಡಿಸುತ್ತೇನೆ. ಇದನ್ನು ಯಾರು ಹೇಳುತ್ತಾರೆ? ಪರಮಪಿತ ಪರಮಾತ್ಮನೇ ಹೇಳುತ್ತಾರೆ - ನಾನು ಬ್ರಹ್ಮಾಂಡದ ಮಾಲೀಕನಾಗಿದ್ದೇನೆ. ಬ್ರಹ್ಮಾಂಡದ ಮಾಲೀಕರು ನೀವು ಮಕ್ಕಳಾಗಿದ್ದೀರಿ. ಆದರೆ ನೀವು ತಂದೆಯ ಜೊತೆ ಇರುವಾಗ ಮಾತ್ರ. ಅದನ್ನು ಮಧುರ ಮನೆ ಎಂದು ಹೇಳುತ್ತಾರೆ. ನಂತರ ಯಾವಾಗ ಸೃಷ್ಟಿಯನ್ನು ರಚಿಸಲಾಗುತ್ತದೆ, ಆಗ ಮೊದಲು ಬ್ರಾಹ್ಮಣರನ್ನು ರಚಿಸುತ್ತಾರೆ, ಅವರೇ ನಂತರ ದೇವತೆಗಳಾಗುತ್ತಾರೆ. ಅವರು ಪೂರ್ಣ 84 ಜನ್ಮಗಳನ್ನು ತೆಗೆದುಕೊಳ್ಳುತ್ತಾರೆ. ಶಿವತಂದೆಯಂತೂ ಸದಾ ಪೂಜ್ಯರಾಗಿದ್ದಾರೆ. ಆತ್ಮವು ಪುನರ್ಜನ್ಮವನ್ನು ತೆಗೆದುಕೊಳ್ಳಲೇ ಬೇಕಾಗಿದೆ. ಬಾಕಿ 84 ಲಕ್ಷ ಜನ್ಮಗಳಿರಲು ಸಾಧ್ಯವಿಲ್ಲ. ತಂದೆಯು ಹೇಳುತ್ತಾರೆ ಮಕ್ಕಳೇ ನೀವು ತಮ್ಮ ಜನ್ಮಗಳನ್ನು ಅರಿತುಕೊಂಡಿಲ್ಲ, ಆದ್ದರಿಂದ ನಾನು ತಿಳಿಸುತ್ತೇನೆ. ಇದನ್ನು 84 ಜನ್ಮಗಳ ಚಕ್ರವೆಂದು ಹೇಳಲಾಗುತ್ತದೆ, 84 ಲಕ್ಷ ಜನ್ಮಗಳದಲ್ಲ. ಈ ಚಕ್ರವನ್ನು ನೆನಪು ಮಾಡುವುದರಿಂದ ನೀವು ಚಕ್ರವರ್ತಿ ರಾಜರಾಗುತ್ತೀರಿ. ಈಗ ನನ್ನೊಬ್ಬನನ್ನೇ ನೆನಪು ಮಾಡಿ ಎಂದು ತಂದೆಯು ಹೇಳುತ್ತಾರೆ. ದೇಹ ಸಹಿತ ದೇಹದ ಎಲ್ಲಾ ಸಂಬಂಧಗಳನ್ನು ಮರೆತು ಹೋಗಿ. ಈಗ ಇದು ನಿಮ್ಮ ಅಂತಿಮ ಜನ್ಮವಾಗಿದೆ. ಎಲ್ಲಿಯ ತನಕ ಈ ಮಾತು ಬುದ್ಧಿಯಲ್ಲಿ ಬರುವುದಿಲ್ಲವೋ ಅಲ್ಲಿಯ ತನಕ ತಿಳಿದುಕೊಳ್ಳುವುದಿಲ್ಲ. ಇದು ಹಳೆಯ ಶರೀರ, ಹಳೆಯ ಪ್ರಪಂಚವಾಗಿದೆ. ಈ ಶರೀರವಂತು ಸಮಾಪ್ತಿ ಆಗುತ್ತದೆ. ಕಥೆಯು ಇದೆ - ನಾವು ಸತ್ತರೆ ನಮ್ಮ ಪಾಲಿಗೆ ಈ ಜಗತ್ತೆ ಸತ್ತಂತೆ. ಇದು ಪುರುಷಾರ್ಥದ ಸ್ವಲ್ಪ ಸಂಗಮದ ಸಮಯವಾಗಿದೆ. ಮಕ್ಕಳು ಕೇಳುತ್ತಾರೆ ಬಾಬಾ ಈ ಜ್ಞಾನವು ಎಲ್ಲಿಯ ತನಕ ನಡೆಯುತ್ತದೆ? ಯಾವಾಗ ಭವಿಷ್ಯದ ದೈವೀ ರಾಜಧಾನಿಯು ಸ್ಥಾಪನೆ ಆಗುತ್ತದೆಯೋ ಅಲ್ಲಿಯ ತನಕ ತಿಳಿಸುತ್ತಲೇ ಇರುತ್ತಾರೆ. ಪರಿಕ್ಷೆಯು ಪೂರ್ಣ ಆಗುತ್ತದೆ ನಂತರ ನೀವು ಹೊಸ ಪ್ರಪಂಚಕ್ಕೆ ವರ್ಗಾವಣೆ ಆಗುತ್ತೀರಿ. ಅಲ್ಲಿಯ ತನಕ ಶರೀರಕ್ಕೆ ಒಂದಲ್ಲ ಒಂದು ಆಗುತ್ತಿರುತ್ತದೆ. ಈ ಶಾರೀರಿಕ ರೋಗವು ಕರ್ಮಭೋಗವಾಗಿದೆ. ಬಾಬಾನಿಗೆ ಈ ಶರೀರ ಎಷ್ಟೊಂದು ಪ್ರಿಯವಾಗಿದೆ. ಆದರೂ ಸಹ ಕೆಮ್ಮು ಮುಂತಾದುವು ಇದೆ. ಇದು ಕರ್ಮ ಭೋಗವಾಗಿದೆಯಲ್ಲವೇ. ಬಾಬಾ ಹೇಳುತ್ತಾರೆ ಈ ನಿಮ್ಮ ಕರ್ಮೇಂದ್ರಿಯಗಳು ಹಳೆಯದಾಗಿ ಬಿಟ್ಟಿವೆ, ಆದ್ದರಿಂದ ತೊಂದರೆ ಆಗುತ್ತದೆ. ಇದರಲ್ಲಿ ಬಾಬಾ ಸಹಯ ಮಾಡಲಿ ಎನ್ನುವ ಆಸೆಯನ್ನು ಇಟ್ಟುಕೊಳ್ಳಬಾರದು. ದಿವಾಳಿ ಆದರು, ಕಾಯಿಲೆ ಆಯಿತೆಂದರೆ ತಂದೆಯು ಹೇಳುತ್ತಾರೆ ಇದು ನಿಮ್ಮದೇ ಲೆಕ್ಕಾಚಾರವಾಗಿದೆ. ಹಾ! ಆದರೂ ಯೋಗದಿಂದ ಆಯಸ್ಸು ಹೆಚ್ಚುವುದು, ನಿಮಗೆ ಲಾಭವಿದೆ. ತಮ್ಮ ಪರಿಶ್ರಮ ಮಾಡಿ, ಕೃಪೆ ಕೇಳಬೇಡಿ. ತಂದೆಯ ನೆನಪಿನಲ್ಲಿ ಕಲ್ಯಾಣವಿದೆ. ಎಷ್ಟಾದರೆ ಅಷ್ಟು ಯೋಗಬಲದಿಂದ ಕೆಲಸವನ್ನು ತೆಗೆದುಕೊಳ್ಳಿ. ಹಾಡುತ್ತಾರಲ್ಲವೇ - ನನ್ನನ್ನು ಕಣ್ಣುಗಳಲ್ಲಿ ಅಡಗಿಸಿಕೊಳ್ಳಿ........ ಪ್ರಿಯ ವಸ್ತುವನ್ನು ಕಣ್ಮಣಿ, ಪ್ರಾಣ ಪ್ರಿಯ ಎಂದು ಹೇಳುತ್ತಾರೆ. ಈ ತಂದೆಯಂತು ತುಂಬಾ ಪ್ರಿಯರಾಗಿದ್ದಾರೆ, ಆದರೆ ಗುಪ್ತವಾಗಿದ್ದಾರೆ. ಆದ್ದರಿಂದ ಪೂರ್ಣ ಪ್ರೀತಿಯು ನಿಲ್ಲುವುದಿಲ್ಲ. ಇಲ್ಲವೆಂದರೆ ತಂದೆಗೋಸ್ಕರ ಇಂತಹ ಪ್ರೀತಿ ಇರಬೇಕು, ಮಾತೇ ಕೇಳಬೇಡಿ. ಮಕ್ಕಳನ್ನು ತಂದೆಯು ಕಣ್ಣುಗಳಲ್ಲಿ ಅಡಗಿಸಿಕೊಳ್ಳುತ್ತಾರೆ. ಕಣ್ಣುಗಳು ಎಂದರೆ ಈ ಕಣ್ಣುಗಳಲ್ಲ, ಇದಂತು ಬುದ್ಧಿಯಲ್ಲಿ ನೆನಪಿಟ್ಟುಕೊಳ್ಳಬೇಕಾಗಿದೆ. ಈ ಜ್ಞಾನವನ್ನು ನಮಗೆ ಯಾರು ಕೊಡುತ್ತಿದ್ದಾರೆ? ಪ್ರಿಯಾತಿ ಪ್ರಿಯ ನಿರಾಕಾರಿ ತಂದೆ ಇವರದೇ ಪತಿತ ಪಾವನ, ಜ್ಞಾನ ಸಾಗರ, ಸುಖ ಸಾಗರ ಎನ್ನುವ ಮಹಿಮೆ

ಇದೆ ನಂತರ ಇವರನ್ನು ಸರ್ವವ್ಯಾಪಿ ಎಂದು ಹೇಳಿ ಬಿಡುತ್ತಾರೆ ಅಂದಾಗ ಮತ್ತೆ ಪ್ರತಿಯೊಬ್ಬ ಮನುಷ್ಯರು ಜ್ಞಾನಸಾಗರ, ಸುಖದ ಸಾಗರರಾಗಬೇಕಲ್ಲವೇ. ಆದರೆ ಆಗುವುದಿಲ್ಲ. ಪ್ರತಿ ಆತ್ಮನಿಗೆ ತಮ್ಮ ಅವಿನಾಶಿ ಪಾತ್ರವು ಸಿಕ್ಕಿದೆ. ಇವು ತುಂಬಾ ಗುಪ್ತ ಮಾತುಗಳಾಗಿವೆ. ಮೊದಲು ತಂದೆಯ ಪರಿಚಯ ಕೊಡಬೇಕಾಗಿದೆ. ಪಾರಲೌಕಿಕ ತಂದೆಯು ಸ್ವರ್ಗದ ರಚನೆಯನ್ನು ರಚಿಸುತ್ತಾರೆ. ಸತ್ಯಯುಗ ಸತ್ಯಖಂಡದಲ್ಲಿ ದೇವೀ-ದೇವತೆಗಳ ರಾಜ್ಯವಿರುತ್ತದೆ, ಈ ಹೊಸ ಪ್ರಪಂಚವನ್ನು ತಂದೆಯೇ ರಚಿಸುತ್ತಾರೆ. ಹೇಗೆ ರಚಿಸುತ್ತಾರೆ ಎನ್ನುವುದನ್ನು ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ಪತಿತರನ್ನು ಪಾವನ ಮಾಡಲು ನಾನು ಬರುತ್ತೇನೆ ಎಂದು ತಂದೆಯು ಹೇಳುತ್ತಾರೆ ಎಂದಾಗ ಪತಿತ ಸೃಷ್ಟಿಯಲ್ಲಿ ಬಂದು ಪಾವನ ಮಾಡಬೇಕಾಗುತ್ತದೆಯಲ್ಲವೇ. ಬ್ರಹ್ಮನ ಮುಖಾಂತರ ಸ್ಥಾಪನೆ ಎಂದು ಹೇಳುತ್ತಾರೆ. ಆದ್ದರಿಂದ ತಂದೆಯು ಇವರ ಮುಖಾಂತರ ಜ್ಞಾನವನ್ನು ತಿಳಿಸುತ್ತಾರೆ ಮತ್ತು ಶ್ರೇಷ್ಠ ಕರ್ಮವನ್ನು ಕಲಿಸುತ್ತಾರೆ. ತಂದೆಯು ಮಕ್ಕಳಿಗೆ ಹೇಳುತ್ತಾರೆ-ಮಕ್ಕಳೇ ನಾನು ನಿಮಗೆ ಇಂತಹ ಕರ್ಮವನ್ನು ಕಲಿಸುತ್ತೇನೆ, ಅಲ್ಲಿ ನಿಮ್ಮ ಕರ್ಮವು ವಿಕರ್ಮವಾಗುವುದಿಲ್ಲ. ಏಕೆಂದರೆ ಅಲ್ಲಿ ಮಾಯೆಯೇ ಇರುವುದಿಲ್ಲ. ಆದ್ದರಿಂದ ನಿಮ್ಮ ಕರ್ಮವು ಅಕರ್ಮವಾಗಿ ಬಿಡುತ್ತದೆ. ಇಲ್ಲಿ ಮಾಯೆ ಇದೆ. ಆದ್ದರಿಂದ ಕರ್ಮವು ವಿಕರ್ಮವೇ ಆಗುತ್ತದೆ. ಮಾಯೆಯ ರಾಜ್ಯದಲ್ಲಿ ಏನೇ ಮಾಡುತ್ತೀರೆಂದರೆ ಉಲ್ಟಾ ಆಗಿಯೇ ಮಾಡುತ್ತೀರಿ.

ಈಗ ತಂದೆಯು ಹೇಳುತ್ತಾರೆ, ನನ್ನ ಮುಖಾಂತರ ನೀವು ಎಲ್ಲವನ್ನು ತಿಳಿದುಕೊಳ್ಳುತ್ತೀರಿ. ಅವರೆಲ್ಲರೂ ಪರಮಾತ್ಮನೊಂದಿಗೆ ಮಿಲನ ಮಾಡಲು ಸಾಧನೆ ಮುಂತಾದವುಗಳನ್ನು ಮಾಡುತ್ತಾರೆ, ಅನೇಕ ಪ್ರಕಾರದ ಹಠಯೋಗ ಮುಂತಾದವನ್ನು ಕಲಿಸುತ್ತಾರೆ. ಇಲ್ಲಿ ಒಬ್ಬ ತಂದೆಯನ್ನು ನೆನಪು ಮಾಡಬೇಕಷ್ಟೆ. ಬಾಯಿಯಿಂದ ಶಿವ-ಶಿವ ಎಂದೂ ಹೇಳಬಾರದಾಗಿದೆ. ಇದು ಬುದ್ಧಿಯ ಯಾತ್ರೆಯಾಗಿದೆ. ಎಷ್ಟು ನೆನಪು ಮಾಡುತ್ತೀರಿ, ಅಷ್ಟು ರುದ್ರ ಮಾಲೆಯ ಮಣಿ ಆಗುತ್ತೀರಿ, ತಂದೆಯ ಸಮೀಪ ಬರುತ್ತೀರಿ. ಶಿವಬಾಬಾರವರ ಕೊರಳಿನ ಹಾರವಾಗುವುದು ಅಥವಾ ರುದ್ರ ಮಾಲೆಯಲ್ಲಿ ಸಮೀಪ ಬರುವುದು, ಇದರದ್ದೇ ಸ್ಪರ್ಧೆಯಗಿದೆ. ಚಾರ್ಟ್ ಇಡಬೇಕಾಗಿದೆ. ಇದರಿಂದಲೇ ಅಂತಿಮತಿ ಸೋ ಗತಿ ಆಗಿ ಬಿಡುವುದು. ದೇಹವು ನೆನಪಿಗೆ ಬರಬಾರದು, ಇಂತಹ ಸ್ಥಿತಿಯು ಬೇಕು.

ಈಗ ನಿಮಗೆ ವಜ್ರದಂತಹ ಜನ್ಮವು ಸಿಕ್ಕಿದೆ. ಆದ್ದರಿಂದ ನನ್ನ ಮುದ್ದು ಮಕ್ಕಳೇ, ನಿದ್ರೆಯನ್ನು ಗೆಲ್ಲುವಂತಹ ಮಕ್ಕಳೇ, ಕಡಿಮೆಗಿಂತ ಕಡಿಮೆ 8 ಗಂಟೆ ನನ್ನ ನೆನಪಿನಲ್ಲಿ ಇರಿ. ಇನ್ನೂ ಈ ಅವಸ್ಥೆಯು ಬಂದಿಲ್ಲ. ನಾವು ಇಡೀ ದಿನದಲ್ಲಿ ಎಷ್ಟು ಸಮಯ ನೆನಪಿನ ಯಾತ್ರೆಯಲ್ಲಿ ನಡೆಯುತ್ತೇವೆ ಎಂದು ಚಾರ್ಟ್ ಇಡಿ. ಅಲ್ಲಿಯು ನಿಂತು ಬಿಡುವುದಿಲ್ಲ ತಾನೇ! ತಂದೆಯನ್ನು ನೆನಪು ಮಾಡುವುದರಿಂದ ಆಸ್ತಿಯೂ ಬುದ್ಧಿಯಲ್ಲಿ ಇರುವುದು. ಪ್ರವೃತ್ತಿ ಮಾರ್ಗವಾಗಿದೆಯಲ್ಲವೇ. ತಂದೆಯು ಸ್ಥಾಪನೆ ಮಾಡಿರುವಂತಹ ಸ್ವರ್ಗದ ದೇವೀ-ದೇವತಾ ಧರ್ಮವು ನಂಬರ್ವನ್ ಆಗಿದೆ. ತಂದೆಯು ರಾಜಯೋಗವನ್ನು ಕಲಿಸಿ ಸ್ವರ್ಗದ ಮಾಲೀಕರನ್ನಾಗಿ ಮಾಡುತ್ತಾರೆ, ನಂತರ ಈ ಜ್ಞಾನವು ಪ್ರಾಯಃಲೋಪವಾಗುತ್ತದೆ. ಎಂದಾಗ ನಂತರ ಈ ಜ್ಞಾನವು ಶಾಸ್ತ್ರಗಳಲ್ಲಿ ಎಲ್ಲಿಂದ ಬಂತು? ರಾಮಾಯಣ ಮುಂತಾದವುಗಳು ಅಂತ್ಯದಲ್ಲಿ ಮಾಡಲ್ಪಟ್ಟಿದೆ. ಇಡೀ ಪ್ರಪಂಚವೇ ಲಂಕೆಯಾಗಿದೆ. ರಾವಣನ ರಾಜ್ಯವಾಗಿದೆಯಲ್ಲವೇ. ಕಪಿಗಳ ರೀತಿಯ ಮನುಷ್ಯರನ್ನು ಪವಿತ್ರ ಮಂದಿರಯೋಗ್ಯರನ್ನಾಗಿ ಮಾಡಿ ರಾವಣ ರಾಜ್ಯವನ್ನು ಸಮಾಪ್ತಿ ಮಾಡಿ ಬಿಡುತ್ತಾರೆ. ಸದ್ಗತಿದಾತಾ ತಂದೆಯು ಸದ್ಗತಿಗೋಸ್ಕರ ಜ್ಞಾನವನ್ನು ಕೊಡುತ್ತಾರೆ. ಅವರು ಅಂತ್ಯದಲ್ಲಿಯೇ ಸದ್ಗತಿ ಮಾಡಬೇಕಾಗಿದೆ.

ಈಗ ತಂದೆಯು ಹೇಳುತ್ತಾರೆ - ಮಕ್ಕಳೇ ಮತ್ತೆಲ್ಲರನ್ನು ಬಿಟ್ಟು ನನ್ನೊಬ್ಬನೊಂದಿಗೆ ಕೇಳಿ. ನಾನು ಯಾರಾಗಿದ್ದೇನೆ ಎನ್ನುವ ನಿಶ್ಚಯವು ಮೊದಲು ಬೇಕು. ನಾನು ನಿಮ್ಮ ತಂದೆ ಆಗಿದ್ದೇನೆ. ನಾನು ನಿಮಗೆ ಪುನಃ ಎಲ್ಲಾ ವೇದಶಾಸ್ತ್ರಗಳ ಸಾರವನ್ನು ತಿಳಿಸುತ್ತೇನೆ. ತಂದೆಯು ಈ ಜ್ಞಾನವನ್ನು ಸಮ್ಮುಖದಲ್ಲಿ ಕೊಡುತ್ತಾರೆ. ನಂತರ ವಿನಾಶವಾಗಿ ಬಿಡುತ್ತದೆ. ನಂತರ ದ್ವಾಪರದಲ್ಲಿ ಸಂಶೋಧನೆ ಮಾಡಿದಾಗ ಅದೇ ಗೀತೆ ಮುಂತಾದ ಶಾಸ್ತ್ರಗಳು ಹೊರ ಬರುತ್ತವೆ. ಭಕ್ತಿಮಾರ್ಗಕ್ಕಾಗಿ ಅವಶ್ಯವಾಗಿ ಅದೇ ಸಾಮಾಗ್ರಿಗಳು ಬೇಕು. ಅವುಗಳನ್ನು ಈಗ ನೀವು ನೋಡುತ್ತೀರಿ, ಅನ್ಯರ ಜ್ಞಾನವಂತು ಪರಂಪರೆಯಿಂದ ನಡೆದು ಬರುತ್ತದೆ. ಈ ಜ್ಞಾನವಂತು ಇಲ್ಲಿಯೇ ಸಮಾಪ್ತಿ ಆಗುತ್ತದೆ. ನಂತರದಲ್ಲಿ ಯಾವಾಗ ಸಂಶೋಧನೆ ಆಗುತ್ತದೆ, ಆಗ ಇದೇ ಶಾಸ್ತ್ರ ಮುಂತಾದವುಗಳು ಕೈಯಲ್ಲಿ ಬರುತ್ತವೆ ಆದ್ದರಿಂದ ಇದನ್ನು ಅನಾದಿ ಎಂದು ಹೇಳಿ ಬಿಡುತ್ತಾರೆ. ದ್ವಾಪರದಲ್ಲಿ ಎಲ್ಲಾ ಅದೇ ಶಾಸ್ತ್ರಗಳು ಬರುತ್ತವೆ. ಆಗ ನಾನು ಬಂದು ಪುನಃ ಎಲ್ಲದರ ಸಾರವನ್ನು ತಿಳಿಸುತ್ತೇನೆ, ನಂತರ ಅದೇ ಪುನರಾವರ್ತನೆ ಆಗುವುದು. ಕೆಲವರು ಪುನರಾವರ್ತನೆಯನ್ನು ನಂಬುತ್ತಾರೆ, ಇನ್ನೂ ಕೆಲವರು ಬೇರೆ ಮಾತುಗಳನ್ನು ಹೇಳುತ್ತಾರೆ. ಅನೇಕ ಮತಗಳಿವೆ. ವಿಶ್ವದ ಇತಿಹಾಸ ಭೂಗೋಳವನ್ನು ನೀವು ಮಕ್ಕಳೇ ಅರಿತುಕೊಂಡಿದ್ದೀರಿ, ಮತ್ಯಾರೂ ತಿಳಿಯಲು ಸಾಧ್ಯವಿಲ್ಲ. ಮನುಷ್ಯರಂತು ಕಲ್ಪದ ಆಯಸ್ಸನ್ನು ಲಕ್ಷಾಂತರ ವರ್ಷ ಮಾಡಿ ಬಿಟ್ಟಿದ್ದಾರೆ, ಈ ರೀತಿಯೂ ಅನೇಕರು ಮಹಾಭಾರತ ಯುದ್ಧಕ್ಕೆ 5000 ವರ್ಷಗಳಾಯಿತು ಎಂದು ಹೇಳುತ್ತಾರೆ. ಇದು ಪುನಃ ಅದೇ ಯುದ್ಧವಾಗಿದೆ. ಆದ್ದರಿಂದ ಅವಶ್ಯವಾಗಿ ಗೀತೆಯ ಭಗವಂತನೂ ಇರಬೇಕು! ಒಂದುವೇಳೆ ಕೃಷ್ಣನಾಗಿದ್ದರೆ ಅವರು ನವಿಲುಗರಿಯ ಕಿರೀಟಧಾರಿ ಬೇಕು. ಕೃಷ್ಣನಂತು ಸತ್ಯಯುಗದಲ್ಲಿಯೇ ಇರುತ್ತಾರೆ. ಅದೇ ಕೃಷ್ಣನಂತು ಈಗ ಇರಲು ಸಾಧ್ಯವಿಲ್ಲ. ಅವರ ಎರಡನೆಯ ಜನ್ಮದಲ್ಲಿಯೂ ಅದೇ ಕಲೆಗಳು

ಇರುವುದಿಲ್ಲ. 16 ಕಲೆಗಳಿಂದ 14 ಕಲೆಗಳಾಗುವುದರಿಂದ ಜನ್ಮದಿಂದ ಜನ್ಮ ಸ್ವಲ್ಪ-ಸ್ವಲ್ಪ ಅಂತರವಾಗುತ್ತಾ ಹೋಗುತ್ತದೆಯಲ್ಲವೇ. ಈ ರೀತಿಯ ನವಿಲುಗರಿಯ ಕಿರೀಟಧಾರಿಗಳು ಅನೇಕರಿದ್ದಾರೆ, ಆದರೆ ಕೃಷ್ಣನು ಮೊದಲ ನಂಬರ್ನ 16 ಕಲಾ ಸಂಪೂರ್ಣರಾಗಿದ್ದಾರೆ. ಅವರದು ಪುನರ್ಜನ್ಮದಿಂದ ಸ್ವಲ್ಪ-ಸ್ವಲ್ಪ ಕಲೆಗಳು ಕಡಿಮೆಯಾಗುತ್ತಾ ಹೋಗುತ್ತದೆ. ಇದು ತುಂಬಾ ಗುಹ್ಯ ರಹಸ್ಯವಾಗಿದೆ.

ನಡೆದಾಡುತ್ತಾ-ತಿರುಗಾಡುತ್ತಾ ಸಮಯವನ್ನು ಕಳೆಯಬೇಡಿ. ಇದೇ ಸಂಪಾದನೆಯ ಸಮಯವಾಗಿದೆ ಎಂದು ತಂದೆಯು ಹೇಳುತ್ತಾರೆ. ಯಾರ ಹತ್ತಿರ ತುಂಬಾ ಹಣವಿದೆ ಅವರು ನಮಗೋಸ್ಕರ ಇದೇ ಸ್ವರ್ಗವಾಗಿದೆ ಎಂದು ತಿಳಿಯುತ್ತಾರೆ. ಅದಕ್ಕೆ ತಂದೆಯು ಹೇಳುತ್ತಾರೆ - ಭಲೆ ಇದು ಸ್ವರ್ಗವಾಗಿದ್ದರೆ ನಿಮಗೆ ಶುಭಾಶಯಗಳು. ತಂದೆಯು ಬಡವರ ಬಂಧು ಆಗಿದ್ದಾರೆ. ಬಡವರಿಗೆ ದಾನ ಕೊಡಬೇಕಾಗಿದೆ. ಬಡವರು ಸಮರ್ಪಣೆಯಾಗುವುದು ಸಹಜವಾಗುತ್ತದೆ. ಹಾ! ಕೆಲವರು ವಿರಳವಾಗಿ ಸಾಹುಕಾರರು ಬರುತ್ತಾರೆ. ಇದು ತುಂಬಾ ತಿಳಿದುಕೊಳ್ಳುವ ಮಾತಾಗಿದೆ. ದೇಹದ ಭಾನವನ್ನೂ ಬಿಡಬೇಕಾಗಿದೆ. ಈ ಪ್ರಪಂಚವೇ ಸಮಾಪ್ತಿ ಆಗುವುದಿದೆ. ನಂತರ ನಾವು ತಂದೆಯ ಬಳಿಗೆ ಹೋಗಿ ಬಿಡುತ್ತೇವೆ. ಸೃಷ್ಟಿಯು ಹೊಸದಾಗಿ ಬಿಡುವುದು. ಕೆಲವರಂತು ಅಡ್ವಾನ್ಸ್‌ನಲ್ಲಿಯೂ ಹೋಗುತ್ತಾರೆ. ಶ್ರೀಕೃಷ್ಣನ ತಂದೆ-ತಾಯಿಯು ಅಡ್ವಾನ್ಸ್‌ನಲ್ಲಿ ಹೋಗಬೇಕು, ಅವರು ನಂತರ ಕೃಷ್ಣನನ್ನು ಮಡಿಲಿನಲ್ಲಿ ತೆಗೆದುಕೊಳ್ಳುತ್ತಾರೆ. ಕೃಷ್ಣನಿಂದಲೇ ಸತ್ಯಯುಗವು ಶುರುವಾಗುತ್ತದೆ. ಇವು ತುಂಬಾ ಗುಹ್ಯ ಮಾತುಗಳಾಗಿವೆ. ಇದಂತೂ ತಿಳಿದುಕೊಳ್ಳುವ ಮಾತಾಗಿದೆ-ಕೃಷ್ಣನಿಗೆ ಯಾರು ತಂದೆ-ತಾಯಿ ಆಗುತ್ತಾರೆ? ಯಾರೂ ಸೆಕೆಂಡ್ನಂಬರಿನಲ್ಲಿ ಬರಲು ಯೋಗ್ಯರಾಗಿದ್ದಾರೆ ಅವರೇ ಕೃಷ್ಣನ ತಂದೆ ತಾಯಿ ಆಗಿದ್ದಾರೆ. ಸೇವೆಯಿಂದಲೂ ನೀವು ತಿಳಿದುಕೊಳ್ಳಬಲ್ಲಿರಿ. ಅದೃಷ್ಟದಿಂದಲೂ ಸಹ ಕೆಲವರು ಮುಂದೆ ಹೋಗಿಬಿಡುತ್ತಾರೆ. ಈ ರೀತಿ ಆಗುತ್ತಾ ಇದೆ, ಅಂತ್ಯದವರು ತುಂಬಾ ಫಸ್ಟ್‌ಕ್ಲಾಸ್ ಸೇವೆ ಮಾಡುತ್ತಿದ್ದಾರೆ. ನೀವು ರೂಪ ಬಸಂತ ಮಕ್ಕಳಾಗಿದ್ದೀರಿ. ತಂದೆಯನ್ನೂ ಸಹ ಬಸಂತ್ ಎಂದು ಹೇಳಲಾಗುತ್ತದೆ. ಆದರೆ ಅವರು ನಕ್ಷತ್ರದ ರೀತಿಯಲ್ಲಿ ಇದ್ದಾರೆ. ತುಂಬಾ ದೊಡ್ಡದಾಗಿ ಇಲ್ಲ. ಪರಮ ಆತ್ಮ ಎಂದರೆ ಪರಮಾತ್ಮ. ಅತ್ಮನ ರೂಪವು ದೊಡ್ಡದಾಗಿಲ್ಲ. ಆದರೆ ಮನುಷ್ಯರು ಗೊಂದಲವಾಗಬಾರದು, ಆದ್ದರಿಂದ ದೊಡ್ಡ ರೂಪವನ್ನು ತೋರಿಸಿದ್ದಾರೆ. ಶ್ರೇಷ್ಠಾತಿ ಶ್ರೇಷ್ಠ ಶಿವಬಾಬಾ ಆಗಿದ್ದಾರೆ ನಂತರ ಬ್ರಹ್ಮಾ, ವಿಷ್ಣು, ಶಂಕರ ಆಗಿದ್ದಾರೆ. ಬ್ರಹ್ಮನೂ ಸಹ ವ್ಯಕ್ತದಿಂದ ಅವ್ಯಕ್ತರಾಗುತ್ತಾರೆ. ವಿಷ್ಣುವಿನ ಎರಡು ರೂಪ ಲಕ್ಷ್ಮೀ-ನಾರಾಯಣ ಆಗುತ್ತಾರೆ. ಶಂಕರನ ಪಾತ್ರವು ಸೂಕ್ಷ್ಮವತನದ ತನಕ ಇದೆ. ಇಲ್ಲಿ ಸ್ಥೂಲ ಸೃಷ್ಟಿಯಲ್ಲಿ ಬಂದು ಪಾತ್ರವನ್ನು ಅಭಿನಯಿಸುವುದು ಇಲ್ಲ. ಪಾರ್ವತಿಗೆ ಅಮರ ಕಥೆಯನ್ನು ಹೇಳುವುದಿಲ್ಲ. ಇವೆಲ್ಲವೂ ಭಕ್ತಿಮಾರ್ಗದ ಕಥೆಗಳಾಗಿವೆ. ಈ ಶಾಸ್ತ್ರಗಳು ಪುನಃ ಹೊರಡುತ್ತವೆ. ಅದರಲ್ಲಿ ಹಿಟ್ಟಿನಲ್ಲಿ ಉಪ್ಪಿನಷ್ಟು ಸತ್ಯವಿದೆ. ಶ್ರೀಮತ್ ಭಗವತ್ಗೀತ ಎನ್ನುವ ಅಕ್ಷರವು ಸರಿಯಾಗಿದೆ ನಂತರ ಶ್ರೀಕೃಷ್ಣ ಭಗವಾನ್ ಎಂದು ಹೇಳುತ್ತಾರೆ....... ಇದು ಸಂಪೂರ್ಣವಾಗಿ ತಪ್ಪಾಗಿದೆ. ದೇವತೆಗಳ ಮಹಿಮೆಯೇ ಬೇರೆ. ಶ್ರೇಷ್ಠಾತಿ ಶ್ರೇಷ್ಠ ಪರಮಪಿತ ಪರಮಾತ್ಮನೇ ಆಗಿದ್ದಾರೆ. ಇವರನ್ನು ಎಲ್ಲರೂ ನೆನಪು ಮಾಡುತ್ತಾರೆ, ಅವರ ಮಹಿಮೆಯು ಬೇರೆಯಾಗಿದೆ. ಎಲ್ಲರೂ ಒಂದೇ ಆಗಲು ಹೇಗೆ ಸಾಧ್ಯ? ಸರ್ವವ್ಯಾಪಿ ಎನ್ನುವ ಅರ್ಥವೇ ಬರುವುದಿಲ್ಲ.

ನೀವು ಆತ್ಮೀಯ ರಕ್ಷಣಾ ಸೈನಿಕರಾಗಿದ್ದೀರಿ ಆದರೆ ಗುಪ್ತವಾಗಿದ್ದೀರಿ. ಸ್ಥೂಲ ಆಯುಧಗಳು ಮುಂತಾದವು ಇರಲು ಸಾಧ್ಯವಿಲ್ಲ. ಇದು ಜ್ಞಾನದ ಬಾಣ, ಜ್ಞಾನ ಕಟಾರಿಯ ಮಾತಾಗಿದೆ. ಪವಿತ್ರತೆಯಲ್ಲಿ ಪರಿಶ್ರಮವಿದೆ. ತಂದೆಯೊಂದಿಗೆ ಪೂರ್ಣ ಪ್ರತಿಜ್ಞೆ ಮಾಡಬೇಕಾಗಿದೆ. ಬಾಬಾ ನಾವು ಪವಿತ್ರರಾಗಿ ಅವಶ್ಯವಾಗಿ ಸ್ವರ್ಗದ ಆಸ್ತಿಯನ್ನು ತೆಗೆದುಕೊಳ್ಳುತ್ತೇವೆ. ಆಸ್ತಿಯೂ ಮಕ್ಕಳಿಗೆ ಸಿಗುತ್ತದೆ. ತಂದೆಯು ಬಂದು ಆಶೀರ್ವಾದ ಮಾಡುತ್ತಾರೆ, ಮಾಯಾ ರಾವಣನು ಶ್ರಾಪಿತರನ್ನಾಗಿ ಮಾಡುತ್ತಾನೆ. ಎಂದಾಗ ಇಂತಹ ಪ್ರಿಯಾತಿ ಪ್ರಿಯ ತಂದೆಯ ಜೊತೆ ಎಷ್ಟೊಂದು ಪ್ರೀತಿ ಇರಬೇಕು. ತಂದೆಯು ಮಕ್ಕಳ ನಿಷ್ಕಾಮ ಸೇವೆ ಮಾಡುತ್ತಾರೆ. ಪತಿತ ಪ್ರಪಂಚ, ಪತಿತ ಶರೀರದಲ್ಲಿ ಬಂದು ನೀವು ಮಕ್ಕಳನ್ನು ವಜ್ರ ಸಮಾನ ಮಾಡಿ ತಾನು ನಿರ್ವಾಣ ಧಾಮದಲ್ಲಿ ಹೋಗಿ ಕುಳಿತು ಬಿಡುತ್ತಾರೆ. ಈ ಸಮಯದಲ್ಲಿ ನಿಮ್ಮೆಲ್ಲರ ವಾನಪ್ರಸ್ಥ ಅವಸ್ಥೆ ಆಗಿದೆ. ಆದ್ದರಿಂದ ತಂದೆಯು ಬಂದಿದ್ದಾರೆ ಎಲ್ಲರ ಜ್ಯೋತಿಯು ಬೆಳಗುವುದರಿಂದ ಎಲ್ಲರೂ ಮಧುರರಾಗಿಬಿಡುತ್ತಾರೆ. ತಂದೆಯ ತರಹ ಮಧುರರಾಗಬೇಕಾಗಿದೆ. ಹಾಡುತ್ತಾರಲ್ಲವೇ-ಎಷ್ಟು ಮಧುರ, ಎಷ್ಟು ಪ್ರಿಯ ಶಿವಭೋಲಾ ಭಗವಾನ್.... ಆದರೆ ತಂದೆಯು ಎಷ್ಟು ನಿರಹಂಕಾರದಿಂದ ನೀವು ಮಕ್ಕಳ ಸೇವೆ ಮಾಡುತ್ತಾರೆ. ನೀವು ಮಕ್ಕಳೂ ಸಹ ಎಷ್ಟೊಂದು ರಿಟರ್ನ್ ಸೇವೆ ಮಾಡಬೇಕಾಗಿದೆ. ಈ ಆಸ್ಪತ್ರೆ ಕಂ ವಿಶ್ವ ವಿದ್ಯಾಲಯವು ಮನೆ-ಮನೆಯಲ್ಲಿ ಇರಬೇಕು. ಹೇಗೆ ಮನೆ-ಮನೆಯಲ್ಲಿ ಮಂದಿರ ಮಾಡುತ್ತಾರಲ್ಲವೇ. ನೀವು ಮಕ್ಕಳು ಶ್ರೀಮತದ ಮೇಲೆ 21 ಜನ್ಮಕ್ಕೋಸ್ಕರ ಆರೋಗ್ಯ ಭಾಗ್ಯವನ್ನು ಕೊಡುತ್ತೀರಿ. ನೀವು ಮಕ್ಕಳೂ ಸಹ ಶ್ರೀಮತದ ಮೇಲೆ ನಡೆಯಬೇಕಾಗಿದೆ. ಎಲ್ಲಿಯಾದರೂ ತಮ್ಮ ಮತವು ಕಂಡು ಬಂದರೆ ಅದೃಷ್ಟಕ್ಕೆ ಗೆರೆ ಎಳೆಯಲ್ಪಡುವುದು. ಯಾರಿಗೂ ದುಃಖವನ್ನು ಕೊಡಬೇಡಿ. ಹೇಗೆ ಮಹಾರಥಿ ಮಕ್ಕಳು ಸೇವೆ ಮಾಡುತ್ತಿದ್ದಾರೆ ಹಾಗೆಯೇ ಅನುಕರಣೆ ಮಾಡಬೇಕಾಗಿದೆ. ಸಿಂಹಾಸನಾಧಿಕಾರಿಗಳಾಗುವ ಪುರುಷಾರ್ಥ ಮಾಡಬೇಕಾಗಿದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತ್-ಪಿತ ಬಾಪ್ ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ತಂದೆಯ ಆತ್ಮೀಯ ಮಕ್ಕಳಿಗೆ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಂದೆಯ ಸಮಾನ ನಿರಹಂಕಾರಿಯಾಗಿ ಸೇವೆ ಮಾಡಬೇಕಾಗಿದೆ. ತಂದೆಯ ಯಾವ ಸೇವೆಯನ್ನು ತೆಗೆದುಕೊಳ್ಳುತ್ತಿದ್ದೀರಿ, ಹೃದಯಪೂರ್ವಕವಾಗಿ ಅದರ ರಿಟರ್ನ್ ಕೊಡಬೇಕಾಗಿದೆ, ಬಹಳ ಮಧುರರಾಗಬೇಕಾಗಿದೆ.

2. ನಡೆದಾಡುತ್ತಾ-ತಿರುಗಾಡುತ್ತಾ ತಮ್ಮ ಸಮಯವನ್ನು ಕಳೆಯಬಾರದಾಗಿದೆ... ಶಿವಬಾಬಾರವರ ಕೊರಳಿನ ಹಾರವಾಗಲು ಸ್ಪರ್ಧೆ ಮಾಡಬೇಕಾಗಿದೆ. ದೇಹವೂ ಸಹ ನೆನಪಿಗೆ ಬರಬಾರದು.... ಇದರ ಅಭ್ಯಾಸ ಮಾಡಬೇಕಾಗಿದೆ.

ವರದಾನ: ಡ್ರಾಮಾದ ಪ್ರತಿಯೊಂದು ರಹಸ್ಯವನ್ನು ತಿಳಿದುಕೊಂಡು ಸದಾ ಖುಷಿಯಾಗಿರುವಂತಹ ಜ್ಞಾನಪೂರ್ಣ, ತ್ರಿಕಾಲದರ್ಶಿ ಭವ.

ಯಾವ ಮಕ್ಕಳು ಜ್ಞಾನಪೂರ್ಣ, ತ್ರಿಕಾಲದರ್ಶಿ ಆಗಿರುತ್ತಾರೆಯೋ ಅವರೆಂದಿಗೂ ಬೇಸರವಾಗಲು ಸಾಧ್ಯವಿಲ್ಲ. ಭಲೆ ಯಾರಾದರೂ ಗ್ಲಾನಿಯನ್ನೇ ಮಾಡಲಿ, ಟೀಕೆಯನ್ನೇ ಮಾಡಿದರೂ ಖುಷಿಯಾಗಿರುತ್ತಾರೆ ಏಕೆಂದರೆ ಡ್ರಾಮಾದ ಪ್ರತಿಯೊಂದು ರಹಸ್ಯವನ್ನು ತಿಳಿದುಕೊಂಡಿರುವವರು ಎಂದಿಗೂ ಬೇಸರವಾಗುವುದಿಲ್ಲ. ಅವರೇ ಬೇಸರವಾಗುತ್ತಾರೆ ಯಾರು ರಹಸ್ಯವನ್ನು ತಿಳಿದುಕೊಂಡಿಲ್ಲ. ಆದ್ದರಿಂದ ಸದಾ ಇದನ್ನು ಸ್ಮೃತಿಯಲ್ಲಿಟ್ಟುಕೊಳ್ಳಿರಿ - ಭಗವಂತ ತಂದೆಯ ಮಕ್ಕಳಾಗಿದ್ದರೂ ಖುಷಿಯಾಗಿರದಿದ್ದರೆ ಮತ್ತ್ಯಾವ ಸಮಯದಲ್ಲಿ ಖುಷಿಯಾಗಿರುತ್ತೇವೆ! ಈಗ ಯಾರು ಖುಷಿಯಾಗಿದ್ದಾರೆ, ರಾಜಿಯಾಗಿರುತ್ತಾರೆಯೋ ಅವರೇ ತಂದೆಯ ಸಮೀಪ ಹಾಗೂ ಸಮಾನರಾಗಿರುತ್ತಾರೆ.

ಸ್ಲೋಗನ್: ಯಾರು ವ್ಯರ್ಥದಿಂದ ಮುಗ್ದರಾಗಿರುತ್ತಾರೆಯೋ ಅವರೇ ಸತ್ಯ-ಸತ್ಯವಾದ ಮಹಾತ್ಮನಾಗಿದ್ದಾರೆ.